CC No.102/2024

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ., ನ್ಯಾಯಾಲಯ, ನವಲಗುಂದ.**

| | |
|---|---|
| ಸಿ.ಸಿ. ನಂಬರ್ | : 102/2024 |
| ಸಿ.ಡಬ್ಲೂ | : 02 |
| ಪಿ.ಡಬ್ಲೂ | : 08 |
| ಸಾಕ್ಷಿಯ ಹೆಸರು | : ವಿರೂಪಾಕ್ಷಯ್ಯ ವೀರಭದ್ರಯ್ಯ ಮಣ್ಣಾರಮಠ |
| ವಯಸ್ಸು | : 70 ವರ್ಷ |
| ಉದ್ಯೋಗ | : ಒಕ್ಕಲುತನ |
| ವಾಸ ಸ್ಥಳ | : ಕರ್ಲವಾಡ |

ದಿನಾಂಕಃ 14/08/2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-**

ಪ್ರಕರಣದ ಆರೋಪಿತರ ಪರಿಚಯವಿದೆ. ಚಾಸಾ-1 ಮತ್ತು 3 ರವರ ಪರಿಚಯ ಇದೆ.

2. ಸಾಕ್ಷಿ ನೋಡಿ ಗುರುತಿಸಿದ ಪಂಚನಾಮೆಯನ್ನು **ನಿಪಿ-10** ಎಂದು ಹಾಗೂ ಸಾಕ್ಷಿಯ ಸಹಿಯನ್ನು **ನಿಪಿ-10(ಎ)** ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ದಿನಾಂಕಃ 14-07-2021 ರಂದು ಚಾಸಾ-1 ರವರ ಹಿತ್ತಲದಲ್ಲಿ ಆರೋಪಿತರು ಹಾಗೂ ಚಾಸಾ-1 ರವರಿಗೆ ನಡೆದ ಜಗಳಕ್ಕೆ ಸಂಬಂಧಿಸಿ ಮಾಡಿರುತ್ತೇನೆ. ನನ್ನ ಜೊತೆ ಚಾಸಾ-3 ರವರು ಸಹ ಹಾಜರಿದ್ದರು. ಸದರಿ ದಿನ ಸಹಿ ಮಾಡಿದಾಗ ಸಮಯ ಮ.01.30 ರಿಂದ 02.00 ಗಂಟೆಯಾಗಿತ್ತು. ಸಾಕ್ಷಿ ನೋಡಿ ಗುರುತಿಸಿದ ಭಾವಚಿತ್ರವನ್ನು **ನಿ.ಪಿ.11** ಎಂದು ಗುರುತಿಸಲಾಯಿತು.

(ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ಅನುಮತಿ ಕೊರಿದ್ದು ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ –**

ದಿಃ 14-07-2021 ರಂದು ಬೆಳಿಗ್ಗೆ 10-00 ರಿಂದ 11-00 ಗಂಟೆಯವರೆಗೆ ನಿ.ಪಿ.10 ರಂತೆ ಚಾಸಾ-1 ಹಾಗೂ ಆರೋಪಿತರಿಗೂ ನಡೆದ ಜಗಳದ ಕುರಿತು ಚಾಸಾ-1 ರವರು ತೋರಿಸಿದ ಮೇರೆಗೆ ನನ್ನ ಹಾಗೂ ಚಾಸಾ-3 ರವರ ಸಮಕ್ಷಮ ಪಂಚನಾಮೆ ಮಾಡಿ, ಭಾವಚಿತ್ರ ತೆಗೆದು, ಬಡಿಗೆಯನ್ನು ಜಪ್ತಿಪಡಿಸಿಕೊಂಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುದ್ದೆ ಮಾಲನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಶ್ರೀ ಎನ್ ವಾಯ್ ಎಚ್ ವಕೀಲರಿಂದ**

ನಾನು ಈ ದಿನ ಕರ್ಲವಾಡ ಗ್ರಾಮದಿಂದ ಬಂದಿರುತ್ತೇನೆ. ನಾನು ಧಾರವಾಡದಲ್ಲಿದ್ದು, ಆಗಾಗ ಕರ್ಲವಾಡ ಗ್ರಾಮಕ್ಕೆ ಹೋಗಿ ಬರುವುದು ಮಾಡುತ್ತೇನೆ. ನಾನು ಸ್ವತಃ ನ್ಯಾಯಾಲಯಕ್ಕೆ ಬಂದಿರುತ್ತೇನೆ. ಆರೋಪಿತರು ಹಾಗೂ ಚಾಸಾ-1 ರವರ ನಡುವೆ ಸಿವಿಲ್ ವ್ಯಾಜ್ಯಗಳಿವೆ ಎಂದರೆ ಸರಿ. ಆರೋಪಿತರು ಹಾಗೂ ಚಾಸಾ-1 ರವರಿಗೂ ಆದ ಜಗಳವನ್ನು ನಾನು ನೋಡಿರುವುದಿಲ್ಲ ಎಂದರೆ ಸರಿ. ಯಾವ ಕಾರಣಕ್ಕೆ ಚಾಸಾ-1 ರವರ ಕೈಯಲ್ಲಿ ಮುದ್ದೆ ಮಾಲು ಇತ್ತು ಎಂದು ನನಗೆ ಗೊತ್ತಿಲ್ಲ. ಪಂಚನಾಮೆಗಾಗಿ ನೋಟಿಸನ್ನು ನೀಡಿರುವುದಿಲ್ಲ. ಆದರೆ ಪೋಲೀಸರು ನನಗೆ ಬೆ.11.00 ಗಂಟೆಗೆ ಪಂಚನಾಮೆಗಾಗಿ ಕರೆದಿರುತ್ತಾರೆ. ನಿ.ಪಿ.10 ರಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಆದರೆ ಪೋಲೀಸರು ಓದಿ ಹೇಳಿರುತ್ತಾರೆ. ಆದರೆ ನಾನು ಸದರಿ ದಾಖಲೆಯನ್ನು ಓದಿರುವುದಿಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿರದಿದ್ದರೂ ಸಹ ಚಾಸಾ-1 ರವರಿಗೆ ಸಹಾಯವಾಗಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ.**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**

**ನವಲಗುಂದ.**